# ಆಹಾ ಸುದ್ದಿ!

★ ಸಸಿತೋಟ



ಚೀನಾದ ಶಾಂಡಾಂಗ್ ಪ್ರಾಂತ್ಯದಲ್ಲಿರುವ ಅತ್ಯಂತ ದೊಡ್ಡದಾದ ಕ್ಯಾಪ್ಸೂಲ್ ಹೋಟೆಲ್. ಕ್ಯಾಪ್ಸೂಲ್ ದೊಡ್ಡದಲ್ಲ, ಕ್ಯಾಪ್ಸೂಲ್ ಸಂಖ್ಯೆಗಳು ಜಾಸ್ತಿ ಇವೆ ಅಷ್ಟೆ. 2 X 1 ಮೀಟರ್ ವಿಸ್ತೀರ್ಣ, 1.2 ಮೀಟರ್ ಎತ್ತರದ ಕೊಠಡಿಯಲ್ಲಿ ಎಲ್‌ಸಿಡಿ ಟೀವಿ, ಹಾಸಿಗೆ ಮಾತ್ರ ಇವೆ. ನುಸುಳಿಕೊಂಡು ಒಳ ಸೇರಿಕೊಳ್ಳಬೇಕು. ಜನಸಂಖ್ಯೆ ಈ ಪಾಟಿ ಜಾಸ್ತಿಯಾಗುತ್ತ ಹೋದರೆ ಮನೆಗಳನ್ನೂ ಕ್ಯಾಪ್ಸೂಲ್, ಟ್ಯಾಬ್ಲೆಟ್ ಗಾತ್ರದಲ್ಲಿ ಕಟ್ಟಿಕೊಳ್ಳಬೇಕಾಗಬಹುದು.



ಕುದುರೆ, ಒಂಟೆ ರೇಸ್ ತರಹ ಥಾಯ್ಲೆಂಡ್‌ನ ಚೋನ್‌ಬುರಿಯಲ್ಲಿ ಎಮ್ಮೆಗಳ ರೇಸ್ ನಡೆಯುತ್ತದೆ. ಕಂಬಳದ ತರಹ ಅವುಗಳನ್ನಷ್ಟೇ ಒಂಟಿಯಾಗಿ ಓಡಿಸುವುದಲ್ಲ. ಮೇಲೆ ಮಾಲೀಕ ಕುಳಿತುಕೊಂಡು ಶಿಸ್ತಾಗಿ ಓಡಿಸುತ್ತಾನೆ. ರೇಸ್‌ನಲ್ಲಿ ಗೆದ್ದ ಎಮ್ಮೆ ಹೆಮ್ಮೆಯಿಂದ ಬೀಗುವಂತೆಯೂ ಇಲ್ಲ. ತಕ್ಷಣ ಮಾಲೀಕನ ಕೈ ಬದಲಾಯಿಸಿ ಪಾಕಶಾಲೆಯ ಪಾತ್ರೆಯಲ್ಲಿ ಬೇಯತೊಡಗುತ್ತದೆ. ಪಾಪ, ಎಮ್ಮೆಗಳಿಗೆ ಮ್ಯಾಚ್ ಫಿಕ್ಸಿಂಗ್ ಗೊತ್ತಿದ್ದರೆ ರೇಸ್‌ನಲ್ಲಿ ನಾ ಹಿಂದೆ, ತಾ ಹಿಂದೆ ಎಂದು ಪೈಪೋಟಿ ನಡೆಸಬಹುದಿತ್ತು.



ಚೀನಾದ ಈ ರೈತ ಐದು ಕೆಜಿ ಭಾರವುಳ್ಳ ನೀರಿನಿಂದ ತುಂಬಿದ ಬಕೆಟ್‌ಗಳನ್ನು ಕಣ್ರೆಪ್ಪೆಯಿಂದ ಎತ್ತಿ ಸಾಧನೆ ಮಾಡಿದ. ಅದೇನ್ ಮಹಾ, ನಮ್ಮಲ್ಲಿ ಗುಂಡು ಕಲ್ಲುಗಳನ್ನೇ ಕಣ್ರೆಪ್ಪೆಯಲ್ಲಿ ಎತ್ತುವವರಿದ್ದಾರೆ! ಆದರೆ ಆತ ಚೀನಾದ ರೈತ. ಎರಡೂ ಕೈಗಳಲ್ಲಿ ಎರಡು ಬಕೆಟ್ ಜೊತೆ ಕಣ್ರೆಪ್ಪೆಗಳಲ್ಲಿ ಇನ್ನೆರಡು ಬಕೆಟ್ ನೀರು ಸಾಗಿಸಿ ದುಪ್ಪಟ್ಟು ಗಳಿಸುವ ಚಾಕಚಕ್ಯತೆ ಗೊತ್ತು.

ಎಲ್ಲರ ಕನಸಿನ ಅಮೆರಿಕಾದಲ್ಲಿ ಎಂತಹ ಪರಿಸ್ಥಿತಿ ಬಂತು ನೋಡಿ. ಔಷಧ ಅಂಗಡಿಗಳಲ್ಲಿ ಮಾರುವ ನೋವಿನ ಮಾತ್ರೆಗಳ ಬಾಟಲ್‌ಗೆ ಜಿಪಿಎಸ್ ಅಳವಡಿಸುವಂತೆ ಸರ್ಕಾರ ಆದೇಶಿಸಿದೆಯಂತೆ. ಈ ಮಾತ್ರೆಗಳನ್ನು ಬಂದೂಕು ತೋರಿಸಿ ಕದಿಯುವವರು ಜಾಸ್ತಿಯಾಗಿದ್ದು, ಕಳ್ಳರನ್ನು ಬೆನ್ನಟ್ಟಲು ಈ ಉಪಾಯ. ಆದರೆ ನೋವಿನ ಸಂಗತಿಯೆಂದರೆ ಈ ಮಾತ್ರೆಗಳನ್ನು ತಿನ್ನುವುದು ನೋವಿಗಲ್ಲ, ಚಟಕ್ಕಾಗಿ.



ಉಕ್ರೇನಿನಲ್ಲಿ 'ಹಾರ್ಟ್ ಟು ಹಾರ್ಟ್' ಸರ್ಕಸ್ ಪ್ರದರ್ಶನ ನಡೆಯುತ್ತಿದೆ. ಸರ್ಕಸ್ ಎಂದರೆ ಪ್ರಾಣಿಗಳದ್ದೇ ವೈಭೋಗ. ಮಾಲೀಕನ ಕಿತಾಪತಿ ಮಾತ್ರ ಪರದೆಯ ಹಿಂದೆ ಅನಾವರಣಗೊಂಡಿದೆ. ಕುದುರೆಯೇ ಜೀಬ್ರಾ ದಿರಿಸು ಹಾಕಿಕೊಂಡು ಪ್ರದರ್ಶನಕ್ಕೆ ಕಾದು ನಿಂತಿದೆ. ದ್ವಿಪಾತ್ರ, ತ್ರಿಪಾತ್ರ ಏನೇ ಮಾಡಿದರೂ ಇದು ಸಂಬಳವನ್ನು ಮಾತ್ರ ಜಾಸ್ತಿ ಕೇಳಲಾರದಲ್ಲ.